
## ನನ್ನ ಓದು




ಬದುಕಲಾರದ ಬಲವಂತರು
ಎಂ.ಪಿ. ಉಮಾದೇವಿ
ಪು: 426; ಬೆ: ರೂ. 400
ಪ್ರ: ಅಹರ್ನಿಶಿ, ಶಿವಮೊಗ್ಗ.
ಫೋನ್: 9449174662

ಮನುಷ್ಯರ ಬಾಳಿನಲ್ಲಿ ತೀರಾ ಯಃಕಶ್ಚಿತ್ ಕಾರಣಗಳಿಗಾಗಿಯೂ ದುರಂತಗಳು ನಡೆಯುವ ವಿದ್ಯಮಾನವನ್ನು ಎದುರಿಡುತ್ತದೆ. ಹೊನ್ನಾಳಿ ಸೀಮೆಯ ದುಡಿದುಣ್ಣೋ ರೈತಾಪಿ ಸಮುದಾಯವು ಆಧುನಿಕತೆಯನ್ನು ಬರಮಾಡಿಕೊಳ್ಳುವ ಸಂಧಿಕಾಲದ್ದೆನಿಸುವ ಕಥಾ ಚೌಕಟ್ಟನ್ನು ಹೊಂದಿದೆ. ಮನುಷ್ಯ ಬಾಳಿನ ದುರಂತಗಳು, ಪಾರಾಗುವ ಪ್ರಯತ್ನಗಳು ಎಲ್ಲ ಕಥನಗಳ ಸಾಮಾನ್ಯ ಹುಡುಕಾಟಗಳೆ. ಆದರದು ಭಾಷಿಕವಾಗಿ ಹೇಗೆ ಮರುಸೃಷ್ಟಿಗೊಳ್ಳುತ್ತದೆ ಎಂಬ ಸಾಮರ್ಥ್ಯದಲ್ಲಿ ಕಥನದ ಜೀವದ್ರವ್ಯ ಘನೀಕೃತಗೊಳ್ಳುತ್ತದೆ. ಆ ಗೆಲುವನ್ನು ಓದುಗರ ಅನುಭೂತಿಯಾಗಿಸಿದ ಕೃತಿಯಿದು. ಮೇಲ್ನೋಟಕ್ಕೆ ಒಂದು ಊರಿನ ಎರಡು ಕುಟುಂಬಗಳ ಕಥೆಯಾಗಿ ಕಾಣುವುದು. ಕ್ರಮೇಣ ಕಾಲ-ದೇಶಗಳ ಹಂಗು ಹರಿದುಕೊಂಡು ಎಲ್ಲರದೂ ಆಗಿ ಹರಡಿಕೊಳ್ಳುತ್ತದೆ. ಇಲ್ಲಿಯ ನಿರೂಪಣೆಯ ಸಾವಯವ ಸಾಂದ್ರತೆ, ಕಥೆಯನ್ನು ಕಾಣಿಸುತ್ತದೆ. ಓದುಗರು ಕಥೆಯನ್ನು ಓದುತ್ತಿರುವ, ಕೇಳುತ್ತಿರುವ ಅನುಭವದಾಚೆ ಕಥೆಯನ್ನು ನೋಡುತ್ತಿರುವ ತಲ್ಲೀನತೆಯನ್ನು ಪಡೆಯುತ್ತಾರೆ. ಇದನ್ನೇ ರಾಜೇಂದ್ರ ಚೆನ್ನಿಯವರು, I was stunned by its originality ಎಂದು ಉದ್ಗರಿಸಿದ್ದು. ಕಥನ ಕ್ರಿಯೆಯಲ್ಲಿ, ಕಾವ್ಯ ಮೀಮಾಂಸೆ ಸೂಚಿಸುವ ಕ್ರಿಯೈಕ್ಯದ ಅನುಭೂತಿಯೊಂದು ಸಾಧಿತವಾಗುವ ಅಪರೂಪದ ಕೆಲವು ಕೃತಿಗಳಲ್ಲಿ ಇದೂ ಒಂದು.

ಈ ಕಾದಂಬರಿ ಬರೆಯಲಾದ 80ರ ದಶಕ, ಕನ್ನಡದಲ್ಲಾಗಲೇ ಸ್ತ್ರೀವಾದಿ ಚಿಂತನೆಯು ಹುರಿಗೊಂಡಿದ್ದ ಕಾಲ. ಎಪ್ಪತ್ತರ ದಶಕದ ಚಳವಳಿಗಳ ಏರುಗಚ್ಚು ಎಲ್ಲವನ್ನೂ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ನೋಡಬೇಕಾದ ಪಾಠವನ್ನು ಕಲಿಸಿತ್ತು. ದಮನಕಾರೀ ವಿದ್ಯಮಾನಗಳು ಬದುಕಿನ ಪದರರೂಪೀ ಸಂರಚನೆಯೊಳಗೆ ತನ್ನ ಬಲಾಢ್ಯ ಬೇರುಗಳನ್ನು ಊರಿರುವ ವಿಷಾದ ಮತ್ತು ಉತ್ತರದಾಯಿಯಾದ ಪ್ರತಿರೋಧಗಳು ಸೃಜನಶೀಲ ಜಗತ್ತಿನಲ್ಲಿ ಕಾಣುತ್ತಿದ್ದ ಆ ಸಂದರ್ಭದಲ್ಲಿ ಬಲು ಎಚ್ಚರದಿಂದ ಹೆಣ್ಣಿನ ಬದುಕಿನ ದಮನಿತ ಸ್ತರಗಳು ಅನಾವರಣಗೊಳ್ಳುತ್ತಿದ್ದವು. ಅನುಪಮಾ ನಿರಂಜನರ 'ಮಾಧವಿ', ಎಂ.ಕೆ. ಇಂದಿರಾ ಅವರ 'ಫಣಿಯಮ್ಮ', ಎಚ್. ವಿ. ಸಾವಿತ್ರಮ್ಮನವರ 'ಸೀತೆ ರಾಮ ರಾವಣ', 'ವಿಮುಕ್ತಿ'ಯಂಥ ಕೃತಿಗಳು ಇದೇ ಕಾಲಘಟ್ಟದಲ್ಲಿ ರಚನೆಗೊಂಡಿದ್ದವು. ಗಂಡು-ಹೆಣ್ಣು ಎಂಬ ಸ್ಥಿತಿಗಳು ಸಾಮಾಜಿಕವಾಗಿ ನಿರ್ಧಾರಕತೆಯನ್ನು ಪ್ರತಿಪಾದಿಸುತ್ತಿದ್ದ ಅವಧಿಯದು. ಸಾವಿರಾರು ವರ್ಷಗಳ ಸಾಹಿತ್ಯ ಪರಂಪರೆ ಹೆಣ್ಣನ್ನು ಕಂಡ ಪೂರ್ವನಿಶ್ಚಿತ ಧೋರಣೆಯನ್ನು ಪ್ರಶ್ನಿಸುತ್ತ ಮತ್ತೊಂದು ಸ್ಥಿರೀಕೃತ ಚಿಂತನೆಯತ್ತ ವಾಲುವ ಅಪಾಯವನ್ನು ಸಂಭಾಳಿಸುವ ಅಗತ್ಯವೂ ಇತ್ತೆಂದು ಕಾಣುತ್ತದೆ. ಸಂರಕ್ಷಿತ ಮತ್ತು ಪ್ರಧಾನ ವಲಯ ಎಂದು ಗುರ್ತಿಸುವುದರ ಅಂತರಾಳದ ತಾಕಲಾಟವನ್ನು ನಿರ್ಲಕ್ಷಿಸಬಾರದೆಂಬ ಎಚ್ಚರವನ್ನು ನಿರೂಪಿಸಿದೆ. ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡ ನೋಟಕ್ರಮದಿಂದ ಅತ್ತತ್ತ ಜರುಗುತ್ತ ದಟ್ಟ ವಾಸ್ತವವಾದಿ ನೆಲೆಯನ್ನು ಒಳಗೊಂಡಿದೆ. ಸ್ತ್ರೀವಾದದಲ್ಲಿ ಅಂತರ್ಗತವಾಗಿರುವ,